**O. S. No:45/2024**
**DW:3**

(ಇಂದು ದಿನಾಂಕಃ **04-11-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಪಿ ಕೆ ಎ ವಕೀಲರಿಂದಃ**

ನಾನು ಈಗ ಅಣ್ಣಿಗೇರಿಯ ಬಂಗಾರಪ್ಪನ ಪ್ಲಾಟ್ ನಲ್ಲಿ ವಾಸವಿದ್ದೇನೆ. ಸಾಕ್ಷಿಯು ಮುಂದುವರೆದು ಮೊದಲಿಗೆ ಹಳೇ ಅಮೃತೇಶ್ವರ ನಗರದಲ್ಲಿ ವಾಸವಿದ್ದೆ ಎಂದು ನುಡಿದಿರುತ್ತಾರೆ. ದಿನಾಂಕಃ 07-09-2012 ರಂದು ಮೃತ್ಯು ಪತ್ರವನ್ನು ಮಾಡಲಾಗಿರುತ್ತದೆ. ಸದರಿ ಮೃತ್ಯು ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ. ಸಾಕ್ಷಿಯು ನಿಡಿ-4 ರ ಮೇಲಿರುವ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ನಮಗೆ ವಾದಿ ಹಾಗೂ ಪ್ರತಿವಾದಿಯ ಮನೆತನದ ಬಗ್ಗೆ ಕಳೆದ 10 ವರ್ಷಗಳಿಂದ ಮಾಹಿತಿ ಇರುತ್ತದೆ. ಸದರಿ ನಿಡಿ-4 ನ್ನು ಮಾಡುವ ವೇಳೆ ವಾದಿ ಪ್ರತಿವಾದಿಯ ತಾಯಿಯನ್ನು ಪ್ರತಿವಾದಿ ಬಸ್ ನಲ್ಲಿ ಕರೆದುಕೊಂಡು ಬಂದಿರುತ್ತಾರೆ. ಸದರಿ ನಿಡಿ-4 ನ್ನು ಬರೆಯುವ ವೇಳೆ ದೇವಕ್ಕ ಆರೋಗ್ಯಯುತವಾಗಿದ್ದರು. ಸದರಿ ನಿಡಿ-4 ನ್ನು ಬರೆಯುವ ವೇಳೆ ನವಲಗುಂದದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿದ್ದೆ. ಮೃತ್ಯು ಪತ್ರದ ಬಗ್ಗೆ ಮಾಹಿತಿ ಇರದಿದ್ದರೂ ಸಹ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದೇವಕ್ಕರವರು ಪ್ರತಿವಾದಿಯ ಸಂರಕ್ಷಣೆಯಲ್ಲಿ ಇದ್ದರು ಎಂದು ನುಡಿದಿರುತ್ತಾರೆ. ದೇವಕ್ಕರವರು ಪ್ರತಿವಾದಿಯ ಮನೆಯಲ್ಲಿ 12 ವರ್ಷಗಳ ಕಾಲ ಇದ್ದರು. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೇವಕ್ಕ ರವರು ಮೊದಲಿಗೆ ವಾದಿಯ ಮನೆಯಲ್ಲಿದ್ದು ವಯಸ್ಸಾದ ಬಳಿಕ ಪ್ರತಿವಾದಿಯ ಮನೆಗೆ ಬಂದಿರುತ್ತಾರೆ. ವಾದಿ ಅಣ್ಣಿಗೇರಿಯ ಕೇರಿ ಓಣಿಯ ಮನೆಯಲ್ಲಿ ವಾಸವಿರುತ್ತಾರೆ. ಪ್ರತಿವಾದಿ ಹಳೇ ಅಮೃತೇಶ್ವರ ಓಣಿಯ ಮನೆಯಲ್ಲಿ ವಾಸವಿರುತ್ತಾರೆ. ವಾದಿಗೆ ಕೇರಿ ಓಣಿಯ ಮನೆ ಹಾಗೂ ಪ್ರತಿವಾದಿಗೆ ಹಳೇ ಅಮೃತೇಶ್ವರ ಓಣಿಯ ಮನೆ ಬಂದಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**